ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

**The Karnataka State Rural Development and Panchayat Raj University, Gadag**

ದಿನಾಂಕ 09–04–2021 ಶುಕ್ರವಾರದಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ರೈತ ಭವನ, ಗದಗನಲ್ಲಿ ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳು

# Proceedings of the Special Meeting of the Executive Council held on 09-04-2021 at Raitha Bhavan KSRDPR University, Gadag

ಹಾಜರಿದ್ದ ಸದಸ್ಯರು

| | | |
|---|---|---|
| 1. | Prof. Vishnukanth S. Chatpalli<br>Vice Chancellor, KSRDPRU, | Chairperson |
| 2. | Prof. T.V. Kattimani<br>Former Vice Chancellor, Indir Gandhi National Tribal University<br>Anuppur Dist. Madhya Pradesh. | Member |
| 3. | Dr. S. Rajendra Prasad<br>The Vice Chancellor<br>University of Agricultural Sciences, Bengaluru | Member |
| 4. | Dr. Arun R. Patil<br>Adhiti Adhyapakara agara, Hulikoti. | Member |
| 5. | Shri Abdul Hakim,<br>Member, Executive Council KSRDPRU<br>Social Worker, Educationist and Writer,<br># 3078, 1st Cross, Gayathrinagar, Bengaluru-21. | Member |
| 6. | Prof. Dr. K. M. Hanumantharayappa,<br>Principal & Dean, Faculty of Law (Retd.) and<br>Former Member, Karnataka State Law Commission<br>Presently residing in Guntur, A.P. | Member |
| 7. | Dr. Prakash Bhat,<br>Former C.E.O., Society for Community Participation and<br>Empowerment (SCOPE), No.19, Bayalu, Hoysala Nagar,<br>Haliyala Road, Dharwad-580 003. | Member |
| 8. | Shri G. B. Shivaraj,<br>Vice-President, Gandhi Bhavan,<br>#181, Lakshmi Nivas, 2nd B Main Road, 6th Cross,<br>9th Block, Nagarbhavi 2nd Stage, Bengaluru-72. | Member |
| 9. | Smt. N. Jamuna Urs,<br>Home Scientist (Retd.), J.S.S. KVK, Mysuru,<br># 904/7, 3rd Main Road, 1st Cross,<br>Vidyaranyapuram, Mysuru-570 008. | Member |
| 10. | Prof. Basavaraj L. Lakkannavar<br>Registrar, KSRDPRU. | Ex-Officio Member |
| 11. | Sri Prashanth J. C.<br>Finance Officer, KSRDPRU. | |

**Leave of Absence:**

1. Prof. Dr. R.S. Deshpande,
   Former Director, Institute for Social and Economic Change
   No. 405, 5th Main, 10th Cross, Teachers' Colony,
   Nagarabhavi, Bengaluru-72.

2. Shri B.G. Govindappa, Ex-MLA,
   Belaguru Village & Post,
   Srirampura Hobli, Hosadugra – 577 527.

3. The Vice Chancellor, VTU, Belagavi.

4. The Principal Secretary to Government,
   Rural Development and Panchayat Raj Department
   Govt. of Karnataka, Bengaluru.

5. The Principal Secretary to Government,
   Department of Agriculture, Govt. of Karnataka, Bengaluru.

6. The Principal Secretary to Government,
   Social Welfare Department, Govt. of Karnataka, Bengaluru.

7. The Principal Secretary to Government,
   Labour Department, Govt. of Karnataka, Bengaluru.

8. The Principal Secretary to Government,
   Health Department, Govt. of Karnataka, Bengaluru.

ಪ್ರಾರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರಿಗೆ ಸ್ವಾಗತವನ್ನು ಕೋರಿದರು. ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದಿಂದ ಪ್ರಕಟಣೆಗೊಂಡ **"ಗ್ರಾಮೋದಯ"** ಎಂಬ ತ್ರೈಮಾಸಿಕ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಮುಂದುವರಿದು, ತರಬೇತಿ, ಪ್ರಕಟಣೆ ಮತ್ತು ಮೇಲ್ವಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ. ಅಬ್ದುಲ್ ಆಜೀಜ್ ಮುಲ್ಲಾ ಅವರು ಮಾತನಾಡುತ್ತ, **"ಗ್ರಾಮೋದಯ"** ಎಂಬ ತ್ರೈಮಾಸಿಕ ಪತ್ರಿಕೆ ಸಿದ್ಧಪಡಿಸಲು ಶ್ರಮಿಸಿದ ಎಲ್ಲಾ ಸಿಬ್ಬಂದಿಗಳಿಗೆ ಧನ್ಯವಾದವನ್ನು ತಿಳಿಸಿದರು.

ನಂತರ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರದ ಎಲ್ಲಾ ಸದಸ್ಯರಿಗೂ ಅಭಿನಂದಿಸಿ, ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು ಪುನರ್ ರಚಿಸಿ ಸದಸ್ಯರನ್ನು ನಾಮ ನಿರ್ದೇಶನ ಮಾಡಿ ದಿನಾಂಕ 08-04-2021ರ ಮಾನ್ಯ ರಾಜ್ಯಪಾಲರ ಕಛೇರಿಯ ಅಧಿಸೂಚನೆ ಬಗ್ಗೆ ಸಭೆಗೆ ತಿಳಿಸಿದರು. ಈ ಸಂದರ್ಭದಲ್ಲಿ, ಇಷ್ಟು ತ್ವರಿತ ಗತಿಯಲ್ಲಿ ಶೈಕ್ಷಣಿಕ ಪರಿಷತ್ತನ್ನು ರಚನೆ ಮಾಡಲು ಕಾರಣೀಭೂತರಾದ ಘನತೆವೆತ್ತ ರಾಜ್ಯಪಾಲರಿಗೆ, ಘನ ಸರ್ಕಾರಕ್ಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಸಚಿವರಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ಧನ್ಯವಾದವನ್ನು ತಿಳಿಸಿದರು.

ನಂತರ ಕಾರ್ಯಸೂಚಿಗಳನ್ನು ಪರಿಗಣನೆಗೆ ತಗೆದುಕೊಳ್ಳಲಾಯಿತು.

**ವಿಷಯ ಸಂಖ್ಯೆ 1: ದಿನಾಂಕ 23-12-2020 ರಂದು ಜರುಗಿದ 6ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 23-12-2020 ರಂದು ಜರುಗಿದ 6 ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ.

:: ನಿರ್ಣಯ ::

ದಿನಾಂಕ 23-12-2020 ರಂದು ಜರುಗಿದ 6ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗೆ ಸದಸ್ಯರಿಂದ ಯಾವುದೇ ಆಕ್ಷೇಪಣೆಗಳು ಬಾರದೇ ಇರುವುದರಿಂದ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ 2: ದಿನಾಂಕ 23-12-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಆರನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 23-12-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಆರನೇ ಸಭೆಯ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ. .

:: ನಿರ್ಣಯ ::

ಮಾನ್ಯ ಕುಲಸಚಿವರು ಸಭೆಯ ಮುಂದೆ ಅನುಸರಣಾ ವರದಿ ಮಂಡಿಸಿದರು. ಆರನೇ ಸಭೆಯ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯು ಅನುಸರಣಾ ವರದಿಯನ್ನು ಗಮನಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 3: ದಿನಾಂಕ 02-02-2021 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 02-02-2021 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ.

:: ನಿರ್ಣಯ ::

ದಿನಾಂಕ 02–02–2021 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗೆ ಸದಸ್ಯರಿಂದ ಯಾವುದೇ ಆಕ್ಷೇಪಣೆಗಳು ಬಾರದೇ ಇರುವುದರಿಂದ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ 4: ದಿನಾಂಕ 18–03–2021 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ **18–03–2021** ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ಮಾನ್ಯ ಕುಲಪತಿಗಳು ಸದರಿ ವಿಷಯದ ಬಗ್ಗೆ ಮಾತನಾಡುತ್ತ, ಪ್ರೊ. ಸಿ. ಎಸ್. ಪಾಟೀಲ್, ಪ್ರೊ. ಪಿ. ಪಿ. ನಾಗೇಶ್ವರ್ ರಾವ್ ಹಾಗೂ ಪ್ರೊ. ಜೀವನ್ ಕುಮಾರ್ ಅವರು ಗ್ರಂಥಾಲಯ ಸಲಹಾ ಸಮಿತಿ ಸಭೆಯಲ್ಲಿ ವಿಶೇಷ ಅಹ್ವಾನಿತರಾಗಿ ಹಾಜರಿದ್ದು, ಅವರು ಅಮೂಲ್ಯ ಸಲಹೆಗಳನ್ನು ನೀಡಿದರು. ಸದರಿ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಸದಸ್ಯರು ಪರಿಗಣಿಸಿ ಅನುಮೋದಿಸಿದರು.

**ವಿಷಯ ಸಂಖ್ಯೆ 5: ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಯವರಿಗೆ ದಿನ ಭತ್ಯೆ ಮತ್ತು ಪ್ರಯಾಣ ಭತ್ಯೆ ನೀಡುವ ಕುರಿತು.**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ವಿಶ್ವವಿದ್ಯಾಲಯ ಅಧಿನಿಯಮ 2016 ರ ಪ್ರಕಾರ ಸ್ಥಾಪಿಸಲಾಗಿದೆ. 2017–18 ನೇ ವರ್ಷದಿಂದ  ತನ್ನ ಕಾರ್ಯಗಳನ್ನು ಪ್ರಾರಂಭಿಸಿದೆ.

ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಹಾಗೂ ತರಬೇತಿ ಚಟುವಟಿಕೆಗಳ ಜೊತೆಗೆ ಈಗಾಗಲೇ ವಿವಿಧ ವಿಸ್ತರಣಾ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ವಿಸ್ತರಣಾ ಚಟುವಟಿಕೆಗಳಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಾರ್ಯ ಚಟುವಟಿಕೆಗಳ ನಿಮಿತ್ತ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣ ಮಾಡಬೇಕಾಗಿರುತ್ತದೆ. ಹೀಗೆ ಪ್ರಯಾಣ ಮಾಡಿದಾಗ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕರಾಗ್ರಾಪಂರಾವಿ/ಟಿಎ/ಡಿಎ/ಉಪಸ್ಥಿತಿಭತ್ಯೆ/ಸ್ಥಳೀಯಭತ್ಯೆ/ಅಧಿಕಾರಿ, ಬೋಧಕ, ಬೋಧಕೇತರ /2017–18, ದಿನಾಂಕ 15–03–2018 ರನ್ವಯ ಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ  ದಿನ ಭತ್ಯೆ, ಪ್ರಯಾಣ ಭತ್ಯೆಯ  ಹಾಗೂ ಸ್ಥಳೀಯ ಸಾರಿಗೆ ಭತ್ಯೆ ನೀಡಲಾಗುತ್ತಿದೆ. ಸದರಿ ಸೌಲಭ್ಯವನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ಅನ್ವಯವಾಗುವಂತೆ ವಿಸ್ತರಿಸಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.

ಈ ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ಸದರಿ ವಿಷಯದ ಬಗ್ಗೆ ಮಾತನಾಡುತ್ತ ಮಾನ್ಯ ವಿತ್ತಾಧಿಕಾರಿಗಳು, ಪ್ರಸ್ತುತ ವಿಶ್ವವಿದ್ಯಾಲಯದ ಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾತ್ರ ದಿನ ಭತ್ಯೆ, ಪ್ರಯಾಣ ಭತ್ಯೆಯ ಹಾಗೂ ಸ್ಥಳೀಯ ಸಾರಿಗೆ ಭತ್ಯೆ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ಹೆಚ್ಚು ಸಿಬ್ಬಂದಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದಕಾರಣ, ಸದರಿ ಸೌಲಭ್ಯವನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ಅನ್ವಯವಾಗುವಂತೆ ವಿಸ್ತರಿಸಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಪ್ರೊ. ಟಿ.ವಿ.ಕಟ್ಟೀಮನಿ, ಕುಲಪತಿಗಳು, ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ವಿಜಯನಗರಂ, ಇವರು ಮಾತನಾಡುತ್ತ, ಸದರಿ ವಿಷಯವನ್ನು ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದಿಸಿಗೊಂಡು ಅಂತಿಮ ಅಧಿಸೂಚನೆ ಹೊರಡಿಸಬಹುದಾಗಿದೆ ಎಂದು ತಿಳಿಸಿದರು.

ನಂತರ ಎಲ್ಲಾ ಸದಸ್ಯರು ಸದರಿ ವಿಷಯವನ್ನು ಪರಿಗಣಿಸಿ ಕಛೇರಿ ಕೆಲಸದ ನಿಮಿತ್ತ ನಿಯೋಜಿಸಲ್ಪಡುವ ಎಲ್ಲ ಸಿಬ್ಬಂದಿಗಳಿಗೂ ವಿವಿಧ ಭತ್ಯೆಗಳನ್ನು ಸಂದಾಯವಾಗುವಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸುತ್ತ ಸದರಿ ವಿಷಯವನ್ನು ಅನುಮೋದಿಸಲು ನಿರ್ಣಯಿಸಿದರು.

**ವಿಷಯ ಸಂಖ್ಯೆ 6: 2019-20 ನೇ ಸಾಲಿಗೆ ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಾಸ್ತವ್ಯವಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈಗಾಗಲೇ ಪಾವತಿಸಲಾದ ರೂ. 1500/- ರ ಜೊತೆಗೆ ಸಕಾರದ ಆದೇಶದಂತೆ ಹೆಚ್ಚುವರಿಯಾಗಿ ಪ್ರತಿ ತಿಂಗಳು ರೂ. 100 ರಂತೆ ಭೋಜನಾ ವೆಚ್ಚ ಮುಂಗಡ ಹಣ ಪಾವತಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಾಸ್ತವ್ಯವಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮುಂಗಡ ಭೋಜನಾ ವೆಚ್ಚವನ್ನು ಪಾವತಿಸಲು ರಾಜ್ಯ ಸರ್ಕಾರದ ಅವಕಾಶ ಕಲ್ಪಿಸಿದೆ. ಈ ಭೋಜನಾ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 258 ಪಕವಿ 2017, ಬೆಂಗಳೂರು ದಿನಾಂಕ 17-4-2017 ಅನುಸಾರ ಸಮಾಜ ಕಲ್ಯಾಣ ಇಲಾಖೆ ಮೂಲಕ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 1500/- (ರೂ ಒಂದು ಸಾವಿರದ ಐದು ನೂರು ಮಾತ್ರ) ರಂತೆ ವರ್ಷದ 11 ತಿಂಗಳ ಅವಧಿಗೆ ಮಂಜೂರಾತಿ ನೀಡಿ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ. ರಾಜ್ಯದ ಇತರೆ ವಿಶ್ವವಿದ್ಯಾಲಯಗಳು ಸಹ ಸದರಿ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸಿ ನಂತರ ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡುವ ಹಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಪದ್ಧತಿಯನ್ನು ಅನುಸರಿಸುತ್ತಿವೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 159 ಪಕವಿ 2018 (ಭಾ), ಬೆಂಗಳೂರು ದಿನಾಂಕ 19-7-2019 ರಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು ಮಾಹೆಯಾನ ರೂ. 1500/- (ರೂ. ಒಂದು ಸಾವಿರದ ಐದು ನೂರು ಮಾತ್ರ) ರಿಂದ 1600/- (ರೂ ಒಂದು ಸಾವಿರದ ಆರ ನೂರು ಮಾತ್ರ) ರಂತೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

ದಿನಾಂಕ 26-6-2019 ರಂದು ನಡೆದ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತ ಸಭೆಯಲ್ಲಿ ಅನುಮೋದನೆಗೊಂಡಿರುವಂತೆ ಹಾಗು ವಿಶ್ವವಿದ್ಯಾಲಯದ ಅಧಿಸೂಚನೆ ಆರ್‌ಡಿಪಿಆರ್‌ಯು 41/2 ಶೈಕ್ಷಣಿ 2019-/2019-20 ದಿನಾಂಕ 13-8-2019 ರನ್ವಯ, 2019-20ನೇ ಸಾಲಿಗೆ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ 1500/- (ರೂ ಒಂದು ಸಾವಿರದ ಐದು ನೂರು ಮಾತ್ರ) ರಂತೆ ವರ್ಷದ 11 ತಿಂಗಳ ಅವಧಿಗೆ ಪಾವತಿಸಲಾಗಿರುತ್ತದೆ. ಮುಂದುವರೆದು ಸಮಾಜ ಕಲ್ಯಾಣ ಇಲಾಖೆ ಮೂಲಕ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 1600/- (ರೂ ಒಂದು ಸಾವಿರದ ಆರ ನೂರು ಮಾತ್ರ) ರಂತೆ ಮಂಜೂರು ಮಾಡಿ ಹಣ ಬಿಡುಗಡೆ ಮಾಡಲಾಗಿರುತ್ತದೆ. ಅದರಂತೆ ಪ್ರತಿ ವಿದ್ಯಾರ್ಥಿಗೆ ಈಗಾಗಲೇ ಪಾವತಿಸಲಾಗಿರುವ ರೂ.1500/- ಜೊತೆಗೆ ಹೆಚ್ಚುವರಿಯಾಗಿ ಪ್ರತಿ ತಿಂಗಳಿಗೆ ರೂ. 100/- ಪಾವತಿಸಬೇಕಾಗಿರುತ್ತದೆ.

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್‌ನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ಮೇಲಿನ ವಿಷಯವನ್ನು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಸವಿಸ್ತಾರವಾಗಿ ವಿವರಿಸಿದರು. ಇದು ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆದೇಶಿಸಿರುವುದರಿಂದ, ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಪರಿಗಣಿಸಿ ಕಾರ್ಯಗತಗೊಳಿಸಬಹುದು ಎಂದು ತಿಳಿಸುತ್ತ ಅನುಮೋದಿಸಿದರು.

**ವಿಷಯ 7: ವಿಶ್ವವಿದ್ಯಾಲಯದಿಂದ ಸರ್ಕಾರದ ನಿಯಮಗಳನುಸಾರ ಗದಗ ಜಿಲ್ಲೆಯ ಸರಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿರುವ ವಿಷಯವನ್ನು ಪರಿಗಣಿಸುವ ಹಾಗೂ ಅನುಸಮರ್ಥಿಸುವ ಕುರಿತು.**

**ಪರಾಮರ್ಶ ಟಿಪ್ಪಣಿ :**

ವಿಶ್ವವಿದ್ಯಾಲಯವು ಶೈಕ್ಷಣಿಕ ಕೇಂದ್ರವಾಗಿರುವದರಿಂದ ಗ್ರಾಮೀಣ ಭಾಗದ ಸರಕಾರಿ ಶಾಲೆಗಳ ಗುಣಾತ್ಮಕ ಮತ್ತು ಸಮಗ್ರ ಅಭಿವೃದ್ಧಿಗಾಗಿ ಕೆಲವು ಶಾಲೆಗಳನ್ನು ದತ್ತು ತೆಗೆದುಕೊಳ್ಳಬೇಕೆಂಬದು ಸರ್ಕಾರದ ಯೋಜನೆಯಾಗಿದೆ. ದಿನಾಂಕ 12/10/2020 ರಂದು ಶ್ರೀ ಎಂ ಆರ್ ದೊರೆಸ್ವಾಮಿ, ಸಲಹೆಗಾರರು, ಶಿಕಣ ಸುಧಾರಣೆಗಳು ಕರ್ನಾಟಕ ಸರ್ಕಾರ ಇವರಿಂದ ಬಂದಿರುವ ಪತ್ರದನ್ವಯ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಯಲ್ಲಿ ಬರುವ 10 ಶಾಲೆಗಳನ್ನು ದತ್ತು ಪಡೆದುಕೊಂಡು ಅಭಿವೃದ್ಧಿಪಡಿಸಲು ತಿಳಿಸಿರುತ್ತಾರೆ. ಅದರಂತೆ ಗದಗ ಜಿಲ್ಲೆಯ ಗದಗ ತಾಲೂಕಿನ 14 ಸರ್ಕಾರಿ ಶಾಲೆಗಳನ್ನು ದತ್ತು ಪಡೆಯುವ ಕುರಿತು ಸಂಬಂಧಪಟ್ಟವರಿಗೆ ಮಾಹಿತಿ ನೀಡಲಾಯಿತು. ದಿನಾಂಕ 24/11/2020 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಸರ್ಕಾರಿ ಶಾಲೆಗಳ **" ದತ್ತು ಸ್ವೀಕಾರ "** ಪತ್ರವನ್ನು ಮಾನ್ಯ ಕುಲಪತಿಗಳು ಪಡೆದುಕೊಂಡಿರುತ್ತಾರೆ.

ದಿನಾಂಕ 26-11-2020 ರಂದು ಶ್ರೀ. ಸಿ.ಸಿ. ಪಾಟೀಲ್, ಅಂದಿನ ಸಚಿವರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು, ಗದಗ ಹೆಚ್ಚುವರಿಯಾಗಿ 6 ಸರ್ಕಾರಿ ಶಾಲೆಗಳನ್ನು ದತ್ತು ಸ್ವೀಕಾರ ಪಡೆಯಬೇಕಾಗಿ ಕೋರಿರುತ್ತಾರೆ. ಅದರಂತೆ ಗದಗ ಜಿಲ್ಲೆಯ ಒಟ್ಟು 20 ಶಾಲೆಗಳನ್ನು ದತ್ತು ಪಡೆದುಕೊಂಡು ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ವಿವಿಧ ಆಯಾಮಗಳಲ್ಲಿ ಅಭಿವೃದ್ಧಿ ಪಡೆಸಲಾಗುತ್ತಿದೆ.

ಶೈಕ್ಷಣಿಕ ಚಟುವಟಿಕೆಗಳ ಮತ್ತು ಶಾಲೆಯ ಅಭಿವೃದ್ಧಿಗಾಗಿ, ವಿಶ್ವವಿದ್ಯಾಲಯವು ಕಾರ್ಯೋನ್ಮುಖವಾಗಿರುವ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರ ಪರಿಗಣನೆಗಾಗಿ ಹಾಗೂ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ಮೇಲಿನ ವಿಷಯದ ಬಗ್ಗೆ ಮಾತನಾಡುತ್ತ, ಮಾನ್ಯ ಕುಲಪತಿಗಳು ರಾಜ್ಯ ಸರ್ಕಾರವು ಸರ್ಕಾರಿ ಶಾಲಾ ಶಿಕ್ಷಣ ಹಾಗೂ ಮೂಲಸೌಕರ್ಯಗಳ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಡಾ. ಎಮ್.ಆರ್. ದೊರೆಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಶಾಲೆಗಳನ್ನು ದತ್ತು ಸ್ವೀಕಾರ ಪಡೆಯಲು ತಿಳಿಸಲಾಗಿರುತ್ತದೆ. ನಮ್ಮ ವಿಶ್ವವಿದ್ಯಾಲಯವು ಗದಗ ಜಿಲ್ಲೆಯ ಸುತ್ತ ಮುತ್ತ ಇರುವ 20 ಶಾಲೆಗಳನ್ನು ಈವರೆಗೆ ದತ್ತು ಸ್ವೀಕರ ಪಡೆದಿದೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ.ಎಡ್ ಹಾಗೂ ಎಮ್.ಎಡ್ ಮಾಡಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನೊಳಗೊಂಡು ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಶಾಲೆಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ನೀಡುವುದರಲ್ಲಿ ಹಾಗೂ ಅಲ್ಲಿನ ಅಗತ್ಯತೆಗಳ ಕುರಿತು ಅಧ್ಯಯನ ಕೈಗೊಂಡು ಸಂಬಂಧಪಟ್ಟವರ ಗಮನಕ್ಕೆ ತರಲಾಗುತ್ತಿದೆ ಎಂದು ವಿವರಿಸಿದರು. ಈ ಶಾಲೆಗಳ ಮುಖ್ಯೋಪಾಧ್ಯಾಯರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಡಿ.ಡಿ.ಪಿ.ಐ. ಅವರೊಂದಿಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ಸಭೆ ನಡೆಸಿ ಅಲ್ಲಿನ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು ಎಂದು ತಿಳಿಸಿದರು.

ಮುಂದುವರೆದು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ್ ಜೆ. ಸಿ. ಅವರು ಮಾತನಾಡುತ್ತಾ, ಶಾಲೆಗೆ ಬೇಕಾದ ಕುಡಿಯುವ ನೀರಿನ ಸೌಕರ್ಯ, ಶೌಚಾಲಯ ಕಟ್ಟಡ ಕಟ್ಟಿಸಲು ಇನ್ನಿತರೆ ಅಗತ್ಯಗಳನ್ನು ಜಿಲ್ಲಾ ಪಂಚಾಯಿತಿಯವರ ಸಂಯೋಜನೆಯೊಂದಿಗೆ ಸಹಾಯ ಮಾಡಿಸಲಾಗುತ್ತಿದೆ ಎಂದು ವಿವರಿಸಿದರು.

ಪ್ರೊ. ಟಿ. ವಿ. ಕಟ್ಟೀಮನಿಯವರು ಮೇಲಿನ ವಿಷಯದ ಬಗ್ಗೆ ಮಾತನಾಡುತ್ತ ವಿದ್ಯಾರ್ಥಿಗಳಿಗೆ ಏಪ್ರಿಲ್ ಮತ್ತು ಮೇ ತಿಂಗಳ ರಜೆ ದಿನಗಳಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಯ ವತಿಯಿಂದ ಅಗತ್ಯ ಶಿಕ್ಷಣ ತರಬೇತಿಯನ್ನು ನೀಡಬಹುದು ಎಂದು ತಿಳಿಸಿದರು. ಶಾಲೆಗಳನ್ನು ದತ್ತು ತೆಗೆದುಕೊಂಡಿರುವುದು, ಒಳ್ಳೆಯ ಕ್ರಮವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲೆಗಳಿಗೆ ಬೇಕಾದ ಗ್ರಂಥಾಲಯದ ವ್ಯವಸ್ಥೆ ಮಾಡಬೇಕು ಎಂದು ಪ್ರೊ. ಅರುಣ್ ಆರ್. ಪಾಟೀಲ್ ರವರು ತಿಳಿಸಿದರು.

ಶ್ರೀ ಜಿ. ಬಿ. ಶಿವರಾಜು ಅವರು ಮಾತನಾಡುತ್ತ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಉನ್ನತ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳ ಶಿಕ್ಷಣವನ್ನು ಕೂಡ ನೀಡಬೇಕಿದೆ ಎಂದು ತಿಳಿಸಿದರು.

ಬೋಧಕ ಸಿಬ್ಬಂದಿಗೆ ಅಗತ್ಯ ತರಬೇತಿ ನೀಡುವ ಅವಶ್ಯಕತೆ ಇದೆ ಎಂದು ಪ್ರೊ. ಪ್ರಕಾಶ್ ಭಟ್ ಅವರು ತಿಳಿಸಿದರು.

ಶ್ರೀಮತಿ ಜಮುನಾ ಅರಸ್ ಅವರು ಮಾತನಾಡುತ್ತ ಎಸ್.ಎಸ್.ಎಲ್.ಸಿ. ಮುಗಿದು ಹೊರಬರುವ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಬೇರೆ ಬೇರೆ ಮೂಲಗಳಿಂದ ಆರ್ಥಿಕ ನೆರವು ದೊರಕಿಸಿಕೊಡುವುದರ ಬಗ್ಗೆ ವಿಶ್ವವಿದ್ಯಾಲಯ ಗಮನಿಸಬಹುದಾಗಿದೆ ಎಂದು ತಿಳಿಸಿದರು.

ಪ್ರೊ.ರಾಜೇಂದ್ರ ಪ್ರಸಾದ ಅವರು ಮಾತನಾಡುತ್ತ, ದತ್ತು ಪಡೆದುಕೊಂಡ ಶಾಲೆಗಳಲ್ಲಿ "Nutrition Garden" ಗಳನ್ನು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಮೇಲಿನ ಸಲಹೆ ಮತ್ತು ಅಭಿಪ್ರಾಯಗಳೊಂದಿಗೆ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಪರಿಗಣಿಸಿ ಅನುಮೋದಿಸಲು ನಿರ್ಧರಿಸಿದರು.

**Agenda 8: Seeking revision of Travel Allowance (TA) to the Chairman and Members of Board of Examiners and Valuers.**

Various faculty from other distinguished Universities attend Examination related works such as Board of Examiners meeting, Practicals, Viva Voce and Valuation of Answer Scripts.

The Travel Allowance for these examiners is being paid, as per the University Notification ಸಂಖ್ಯೆ: ಕ.ರಾ.ಗ್ರಾ.ಅ.ಪ.ರಾ.ವಿ:ಗದಗ:ಸಿ.ಸಂ.ಭ.ದ:೨೦೧೭-೧೮ ದಿನಾಂಕ: 23-01-2018 (Annexure 1). The rates of TA are as follows:

| Sl. No. | Particulars | Travel Allowance |
|---|---|---|
| 1. | The Chairman and Members of Board of Examiners | 3AC or Bus as eligible or 2AC (on production of the tickets) Local Conveyance to and fro auto fare of Rs. 100/- each side from Bus / Rly station & Rs. 100/- each side from Bus / Rly station to KSRDPRU Campus on certification or actual on production of bills. Own Car – Rs. 4.00 per km for a maximum of 400 km on certification. |
| 2. | External Examiners (UGC & Non – UGC) Guest Faculty | |

The University pays Rs. 8.00 per km towards travel allowance, if travelled by own car to the Honorary Professors who have been invited to engage classes.
Few of the Universities across Karnataka have made provision to pay Rs. 8.00 per km for the Faculties who attend to such examination related works.

Further, owing to the increase in petrol & diesel rates, the Faculties have requested that, the rate of TA while travelling by Own Car be revised from existing Rs. 4 per km to Rs. 8.00 per km for a maximum of 400 km on certification.

In this regard, the subject is placed before kind perusal and approval of the Executive Council.

:: ನಿರ್ಣಯ ::

ಮೇಲಿನ ವಿಷಯವನ್ನು ಮಾನ್ಯ ಕುಲಪತಿಗಳು ಸವಿಸ್ತಾರವಾಗಿ ವಿವರಿಸಿದರು. ಸದಸ್ಯರು ಇದರ ಕುರಿತು ಚರ್ಚಿಸಿ, ಸದರಿ ಪ್ರಸ್ತಾವನೆಯನ್ನು ಅನುಮೋದಿಸಲು ನಿರ್ಣಯಿಸಿದರು.

**Agenda 9: Conferment of Honoris Causa at First Convocation on 10th April, 2021.**

The First Convocation would be held on 10th April, 2021 at 11.00 AM in New Campus of University, as per the approval of Hon'ble Governor and the Chancellor vide letter dated: 04th March, 2021. After detailed deliberation in the special meetings of Academic Council and Executive Council held on 2nd February, 2021. The following names were recommended for the Expert Scrutiny Committee to confer Honoris Causa at the Convocation:

1. Dr. Ashok Dalwai
2. Shri Adrushya Kadasiddeshwar Swamiji
3. Shri H K Patil
4. Smt. Sunanda Jayaram
5. Smt. Kavitha Mishra
6. Shri Shivaji Kagnikar

The above recommendations were placed before the meeting of Expert Scrutiny Committee held on 18.03.2021 at the Karnataka State Higher Education Council, Bengaluru. Expert Scrutiny Committee submitted the proceedings of the meeting pertaining to conferment of Honoris Causa for the consideration and approval of the Hon'ble Governor and the Chancellor.

The subject is submitted to the kind information of the Executive Council.

:: ನಿರ್ಣಯ ::

ಮೇಲಿನ ವಿಷಯದ ಬಗ್ಗೆ ಮಾತನಾಡುತ್ತಾ ಮಾನ್ಯ ಕುಲಪತಿಗಳು, ಘನತೆವೆತ್ತ ರಾಜ್ಯಪಾಲರು, ಗೌರವ ಡಾಕ್ಟರೇಟ್ ನೀಡಬೇಕಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸಿ ಕಳುಹಿಸಿರುತ್ತಾರೆ. ಇದರನ್ವಯ, ಡಾ.ಅಶೋಕ ದಳವಾಯಿ ಮತ್ತು ಶ್ರೀ.ಎಚ್.ಕೆ.ಪಾಟೀಲ, ಇವರಿಗೆ ಗೌರವ ಡಾಕ್ಟರೇಟ್ ನೀಡಬೇಕಾಗಿರುತ್ತದೆ. ಅದರಂತೆ, ಸದರಿ ಮಾಹಿತಿಯನ್ನು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿರುತ್ತದೆ. ಇದರ ಜೊತೆಗೆ, ಗೌರವ ಡಾಕ್ಟರೇಟ್ ಪಡೆದುಕೊಳ್ಳುವ ಅಭ್ಯರ್ಥಿಗಳಿಗೆ "ಗ್ರಾಮೀಣಾಭಿವೃದ್ಧಿ ಚೇತನ" ಎಂಬ ಬಿರುದನ್ನು ವಿಶ್ವವಿದ್ಯಾಲಯದ ವತಿಯಿಂದ ನೀಡಲಾಗುವುದು ಎಂದು ವಿವರಿಸಿದರು. ಗೌರವ ಡಾಕ್ಟರೇಟ್ ಪಡೆದುಕೊಂಡ ಅಭ್ಯರ್ಥಿಗಳ ಸೈಟೇಷನ್ (ಕಿರು ಪರಿಚಯ) ವನ್ನು ಘಟಿಕೋತ್ಸವದಲ್ಲಿ ನಿಯಮಾನುಸಾರ ಮಾಡಬೇಕಾಗಿರುತ್ತದೆ. ಆದ ಕಾರಣ, ಡಾ.ಅಶೋಕ ದಳವಾಯಿ ಇವರ ಪರಿಚಯವನ್ನು ಡಾ.ಅಬ್ದುಲ್ ಅಜೀಜ್, ಸಹಾಯಕ ನಿರ್ದೇಶಕರು, ತರಬೇತಿ, ಪ್ರಕಟಣೆ, ಮೇಲ್ವಿಚಾರಣಾ ಕೇಂದ್ರ ಇವರಿಗೂ ಹಾಗೂ ಶ್ರೀ.ಎಚ್.ಕೆ.ಪಾಟೀಲ ಇವರ ಪರಿಚಯವನ್ನು ಶ್ರೀ ಪ್ರಶಾಂತ ಜೆ.ಸಿ., ವಿ.ವಿ.ಯ ಹಣಕಾಸು ಅಧಿಕಾರಿಗಳು. ಇವರು ನಿರ್ವಹಿಸಲು ಅನುಮೋದನೆ ನೀಡಬಹುದಾಗಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಪ್ರೊ. ಟಿ. ವಿ. ಕಟ್ಟೀಮನಿ ಅವರು ಮಾತನಾಡುತ್ತ Scrutiny Committee ಯ ಸದಸ್ಯನಾಗಿ ಆಯ್ಕೆಮಾಡಿದ ಕಾರ್ಯನಿರ್ವಾಹಕ ಪರಿಷತ್ತಿಗೆ ಧನ್ಯವಾದಗಳನ್ನು ತಿಳಿಸುತ್ತಾ ವಿಶ್ವವಿದ್ಯಾಲಯದ ಉತ್ತಮ ಸದ್ಭಾವನೆಯನ್ನು ಮುಂದುವರಿಸಲು Scrutiny Committee ಯು ಶ್ರೀ ಹೆಚ್. ಕೆ. ಪಾಟೀಲ, ಶ್ರೀ ಅಶೋಕ ದಳವಾಯಿ ಹಾಗೂ ಶ್ರೀಮತಿ ಸುನಂಧಾ ಜಯರಾಂ ಅವರ ಹೆಸರುಗಳನ್ನು ಮಾನ್ಯ ಕುಲಾಧಿಪತಿಗಳಿಗೆ ಶಿಫಾರಸ್ಸು ಮಾಡಲಾಗಿತ್ತು. ಮಾನ್ಯ ಕುಲಾಧಿಪತಿಗಳು ಶ್ರೀ ಹೆಚ್. ಕೆ. ಪಾಟೀಲ ಮತ್ತು ಶ್ರೀ ಅಶೋಕ ದಳವಾಯಿಯವರ ಹೆಸರಗಳನ್ನು ಆಯ್ಕೆಮಾಡಿದ್ದು ಸಂತಸದ ವಿಷಯವೆಂದು ತಿಳಿಸಿದರು.

ಪ್ರೊ. ಹನುಮಂತರಾಯಪ್ಪ ಅವರು ಮಾತನಾಡುತ್ತ ಆಯ್ಕೆಯಾದ ಹೆಸರುಗಳು ಯಾವುದೇ ವಿವಾದವಿಲ್ಲದೆ ಸ್ವೀಕರಿಸಲಾಗಿರುವುದು ಖುಷಿಯ ಸಂಗತಿ ಎಂದು ತಿಳಿಸಿದರು. ಆಯ್ಕೆಯ ಪ್ರಕ್ರಿಯೆ ಯಾವುದೇ ಅಡೆತಡೆ ಇಲ್ಲದೆ ಸರಾಗವಾಗಿ ನಡೆದುದ್ದಕ್ಕಾಗಿ Scrutiny Committee ಯ ಸದಸ್ಯರಿಗೆ ಹಾಗೂ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಿಗೆ ಪ್ರೊ. ಅರುಣ್ ಆರ್. ಪಾಟೀಲ್ ರವರು ಅಭಿನಂದಿಸಿದರು.

ಮೇಲಿನ ಚರ್ಚೆ ಮತ್ತು ಅಭಿಪ್ರಾಯಗಳೊಂದಿಗೆ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಪರಿಗಣಿಸಿ, ಗೌರವ ಡಾಕ್ಟರೇಟ್ ಪಡೆದುಕೊಂಡ ಅಭ್ಯರ್ಥಿಗಳ ಸೈಟೇಷನ್ (ಕಿರು ಪರಿಚಯ) ಓದುವ ಕುರಿತು ಕುಲಪತಿಗಳ ಪ್ರಸ್ತಾವನೆಯನ್ನು ಅನುಮೋದಿಸಲು ನಿರ್ಧರಿಸಿದರು.

**ವಿಷಯ: 10: ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿ ನಿರ್ಮಿಸಲಾಗುತ್ತಿರುವ ತರಬೇತಿ ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಶಿರೋನಾಮ ನೀಡುವ ಕುರಿತು.**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ನೂತನ ಕ್ಯಾಪಂಸ್‌ನಲ್ಲಿ, ತರಬೇತಿ ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಭವ್ಯ ಕಟ್ಟಡದ ನಿರ್ಮಾಣ ಪೂರ್ಣ ಹಂತದಲ್ಲಿದೆ. ಈ ಕಟ್ಟಡದಲ್ಲಿ ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಇತರೇ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ವಿಷಯಾಧಾರಿತ ಉನ್ನತ ಮಟ್ಟದ ತರಬೇತಿ, ಸರ್ಟಿಫಿಕೇಟ, ಡಿಪ್ಲೋಮಾ ಕೋರ್ಸುಗಳು ಜರುಗಲಿವೆ. ಅಲ್ಲದೆ, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳ ಆಧಾರದ ಮೇಲೆ ವಿವಿಧ ಪುಸ್ತಕಗಳು, ವರ್ತಮಾನ ಪತ್ರಿಕೆಗಳು, ಜರ್ನಲ್‌ಗಳು, ಮಾಸಿಕ, ತ್ರೈಮಾಸಿಕ, ಪತ್ರಿಕೆಗಳು ಹಾಗೂ ವಾರ್ಷಿಕ ವರದಿಗಳು ಪ್ರಕಟಣೆಗೊಳ್ಳಲಿವೆ.

ಈ ಭವ್ಯ ಕಟ್ಟಡಕ್ಕೆ ಶಿರೋನಾಮೆಯನ್ನು ನೀಡಬೇಕಾಗಿದ್ದು, ಈ ಕೆಳಕಂಡ ಕೆಲವು ಶಿರೋನಾಮಗಳನ್ನು ಪ್ರಸ್ತಾಪಿಸಲಾಗಿದೆ.

- ❖ **ಕೌಶಲ್ಯ ವಿಕಾಸ ಭವನ**
- ❖ **ಕೌಶಲ್ಯ ವಿಕಾಸ ಕೇಂದ್ರ**
- ❖ **ತರಬೇತಿ ಭವನ**
- ❖ **ಕೌಶಲ್ಯ– ಪ್ರಸಾರಾಂಗ ಭವನ**
- ❖ **ಗ್ರಾಮೋದಯ ಭವನ**

ಆದುದರಿಂದ ಈ ಮೇಲ್ಕಂಡ ಶಿರೋನಾಮ ಅಥವಾ ಇನ್ನಾವುದಾದರೋ ಸೂಕ್ತ ಶಿರೋನಾಮ ನೀಡಲು ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ (Executive Council) ಸಭೆಗೆ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ಅಂತಿಮ ಹಂತದಲ್ಲಿರುವ ತರಬೇತಿ ಕೇಂದ್ರಕ್ಕೆ ಮೇಲೆ ಸೂಚಿಸಿರು ಶಿರೋನಾಮಗಳಲ್ಲಿ ಒಂದು ಸೂಕ್ತ ಹೆಸರನ್ನು ಆಯ್ಕೆಮಾಡಿ ಅಥವಾ ಬೇರೆ ಯಾವುದಾದರೂ ಸೂಕ್ತ ಹೆಸರನ್ನು ಮತ್ತು ವಿಶ್ವವಿದ್ಯಾಲಯದ ನೂತನ ಆವರಣಕ್ಕೂ ಒಂದು ಸೂಕ್ತ ಹೆಸರನ್ನು ತಿಳಿಸಲು ಮಾನ್ಯ ಕುಲಪತಿಗಳು ಸಭೆಗೆ ಕೋರಿದರು.

ಈ ಕಟ್ಟಡವು ತರಬೇತಿಗಾಗಿ ಮೀಸಲಾಗಿದೆ, ಅದಕ್ಕಾಗಿ **"ಭವನ"** ಎಂಬ ಪದ ಉಪಯೋಗಿಸುವ ಬದಲು **"ಕೇಂದ್ರ/ Centre"** ಉಪಯೋಗಿಸುವುದು ಸೂಕ್ತ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಸಂಸ್ಕೃತದಲ್ಲಿ ತರಬೇತಿ ಎಂಬ ಪದಕ್ಕೆ **"ಕೌಶಲ್ಯ"**ದ ಬದಲು **"ಕೌಶಲ"** ಎಂಬುದು ಸಮಾನಾರ್ಥಕ ಪದವಾದುದರಿಂದ ಈ ಕಟ್ಟಡಕ್ಕೆ **"ಕೌಶಲ ವಿಕಾಸ ಕೇಂದ್ರ – Skill Development Centre"** ಎಂಬ ಶಿರೋನಾಮ ನೀಡಬಹುದು ಎಂದು ಸಭೆ ತೀರ್ಮಾನಿಸಿತು. ಈ ನಿಟ್ಟಿನಲ್ಲಿ **"ಕೌಶಲ್ಯ"** ಅಥವಾ **"ಕೌಶಲ"**, ಈ, ಎರಡೂ ಪದಗಳ ಸದ್ಬಳಕೆಯ ಕುರಿತು ಕುಲಪತಿಗಳ ಹಂತದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲು ಅನುಮೋದಿಸಲಾಯಿತು.

ಮುಂದುವರೆದು, ವಿಶ್ವವಿದ್ಯಾಲಯದ ನೂತನ ಆವರಣಕ್ಕೆ **"ಜ್ಞಾನ ಶಿಖರ"** ಎಂಬ ಶಿರೋನಾಮವನ್ನು ನೀಡುವ ಕುರಿತು ಮಾನ್ಯ ಕುಲಪತಿಗಳು ಸಭೆಯ ಅಭಿಪ್ರಾಯ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯ ಸದಸ್ಯರು ನೂತನ ಆವರಣಕ್ಕೆ ಶಿರೋನಾಮವನ್ನು ಇನಷ್ಟು ಕಾಲಾವಕಾಶವನ್ನು ತೆಗೆದುಕೊಂಡು ಮುಂದಿನ ದಿನಗಳಲ್ಲಿ ತೀರ್ಮಾನಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು.

ಮೇಲಿನ ಚರ್ಚೆ ಮತ್ತು ಅಭಿಪ್ರಾಯಗಳೊಂದಿಗೆ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಅನುಮೋಧಿಸಲು ನಿರ್ಧರಿಸಿದರು.

**ಟೇಬಲ್ ಅಜೆಂಡಾ 1: ದಿನಾಂಕ 26-03-2021 ರಂದು ಜರುಗಿದ 11ನೇ ಕಾಮಗಾರಿ ಸಮಿತಿಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಷಿತ ಟಿಪ್ಪಣಿ:**

ವಿಶ್ವವಿದ್ಯಾಲಯದ 11ನೇ ಕಾಮಗಾರಿ ಸಮಿತಿ ಸಭೆಯನ್ನು ದಿನಾಂಕ 26-03-2021 ರಂದು ಆಯೋಜಿಸಲಾಗಿತ್ತು. ಕಾಮಗಾರಿ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಸಭೆಯಲ್ಲಿ ಮಂಡಿಸಲಾಗಿದೆ.

**:: ನಿರ್ಣಯ ::**

ಮಾನ್ಯ ಹಣಕಾಸು ಅಧಿಕಾರಿಗಳು ಕಾಮಗಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳನ್ನು ಸವಿವರವಾಗಿ ವಿವರಿಸಿದರು.

ಸದರಿ ಸಮಿತಿಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಪರಿಗಣಿಸಿ ಅನುಮೋದಿಸಿದರು.

**ಟೇಬಲ್ ಅಜೆಂಡಾ 2: ದಿನಾಂಕ 31-03-2021 ರಂದು ಜರುಗಿದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ 2ನೇ ಸಲಹಾ ಸಮಿತಿಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಷಿತ ಟಿಪ್ಪಣಿ:**

ವಿಶ್ವವಿದ್ಯಾಲಯದ 2ನೇ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ ಸಲಹಾ ಸಮಿತಿ ಸಭೆಯನ್ನು ದಿನಾಂಕ 31-03-2021 ರಂದು ಆಯೋಜಿಸಲಾಗಿತ್ತು. ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ ಸಲಹಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಸಭೆಯಲ್ಲಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯವರ ದೈಹಿಕ ಮತ್ತು ಮಾನಸೀಕ ಆರೋಗ್ಯದ ದೃಷ್ಟಿಯಿಂದ ವಿಶ್ವವಿದ್ಯಾಲಯದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಹೆಚ್ಚಿಸಬೇಕಿದೆ. ಅದಕ್ಕಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಛೇರಿ ಸಮಯದ ನಂತರ ಕ್ರೀಡಾ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಹಾಗೂ ಕ್ರೀಡಾಂಗಣ, ಇನ್ನಿತರೆ ಕ್ರೀಡೆಗಳಿಗೆ ಸೂಕ್ತ ಆವರಣ ಮತ್ತು ಒಂದು ಜಿಮ್ನಾಶಿಯಂ ಅನ್ನು ಸ್ಥಾಪಿಸಲು ಸದರಿ ಸಮತಿಯಲ್ಲಿ ವಿಶ್ವವಿದ್ಯಾಲಯ ತೀರ್ಮಾನಿಸಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿದರು.

ಸದರಿ ಸಮಿತಿಯ ನಡಾವಳಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಗಮನಿಸಿ ಅನುಮೋದಿಸಿದರು.

ಅಂತಿಮವಾಗಿ ಸಭೆಗೆ ಹಾಜರಿದ್ದು ಸಲಹೆ ಅಭಿಪ್ರಾಯಗಳನ್ನು ನೀಡಿದ ಎಲ್ಲಾ ಸದಸ್ಯರನ್ನು ಅಭಿನಂದಿಸಿ ವಿಶ್ವವಿದ್ಯಾಲ್ಯಾಯದ ಮೊದಲನೇ ಘಟಿಕೋತ್ಸವದಲ್ಲಿ ಸದಸ್ಯರು ಪಾಲ್ಗೊಳ್ಳಬೇಕೆಂದು ಮಾನ್ಯ ಕುಲಸಚಿವರು ಸಭೆಯಲ್ಲಿ ಕೋರಿದರು.

ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ವಂದನೆ ಸಲ್ಲಿಸುವ ಮುಖಾಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವರು** | **ಕುಲಪತಿಗಳು**